
# ಕಥೋಪದೇಶ

## ದಿಕ್ಕು ಕಾಣದ ಹಕ್ಕಿ



ಒಂದು ಸಲ ಒಂದು ಹಡಗಿನ ಪಟಸ್ತಂಭದ ಮೇಲೆ ಒಂದು ಹಕ್ಕಿ ಕುಳಿತಿತ್ತು. ಹಡಗು ಯಾವಾಗ ಸಮುದ್ರದಲ್ಲಿ ಪ್ರಯಾಣ ಹೊರಟಿತೋ ಅದಕ್ಕೆ ಗೊತ್ತಾಗಲಿಲ್ಲ. ಯಾವಾಗ ಅನಂತಸಾಗರದ ಅರಿವಾಯಿತೋ, ಪಟಸ್ತಂಭವನ್ನು ಬಿಟ್ಟು ದಡವನ್ನು ಹುಡುಕಿಕೊಂಡು ಉತ್ತರದ ಕಡೆಗೆ ಹಾರಿತು. ಅಲ್ಲಿ ದಡ ಕಾಣದೆ ಮತ್ತೆ ದಕ್ಷಿಣದ ಕಡೆಗೆ ಹಾರಿತು. ಅಲ್ಲಿಯೂ ಬರೀ ಸಮುದ್ರವನ್ನು ಕಂಡು ಸುಸ್ತಾಗಿ ಪಟಸ್ತಂಭದ ಮೇಲೆ ಕುಳಿತುಕೊಂಡಿತು. ಸ್ವಲ್ಪಕಾಲ ಅಲ್ಲಿದ್ದು ಪೂರ್ವದಿಕ್ಕಿಗೆ ಹಾರಿತು. ಅಲ್ಲಿಯೂ ಅದೇ ಗತಿ. ಅನಂತರ ಪಶ್ಚಿಮದಿಕ್ಕಿಗೆ ಹಾರಿತು. ಅಲ್ಲಿಯೂ ದಡ ಕಾಣದೆ, ಮತ್ತೆ ಬಂದು ಪಟಸ್ತಂಭದ ಮೇಲೆ ಕುಳಿತುಕೊಂಡಿತು.

**ಯಾವದನ್ನು ಹುಡುಕಿಕೊಂಡು ನಾವು ಅಲೆಯುತ್ತೇವೆಯೋ, ಅದು ನಮ್ಮಲ್ಲಿಯೇ ಇದೆ. ಆದರೂ ಮನುಷ್ಯ ಎಲ್ಲೆಲ್ಲಿಯೋ ಅಲೆಯುತ್ತಾನೆ. ದೇವರು ಎಲ್ಲೋ ಇರುವನು ಎಂದು ಭಾವಿಸಿಕೊಳ್ಳುವುದೇ ಅಜ್ಞಾನ. ದೇವರು ನಮ್ಮಲ್ಲಿಯೇ ಇರುವನು ಎಂದು ತಿಳಿದುಕೊಳ್ಳುವುದೇ ನಿಜವಾದ ಜ್ಞಾನ.**

('ಶ್ರೀರಾಮಕೃಷ್ಣ ವಚನವೇದ' ದ ಒಂದು ಕಥೆ)

## ಭಾರತದ ಆಧ್ಯಾತ್ಮಿಕ ಪರಂಪರೆ – ಜೈಮಿನಿ



ಜೈಮಿನಿ ಋಷಿ ಪೂರ್ವಮೀಮಾಂಸಾ ದರ್ಶನದ ಪ್ರವರ್ತಕ. 'ಪೂರ್ವ' ಎಂದರೆ ಮೊದಲನೆಯದು ಎಂದರ್ಥ. ಮೀಮಾಂಸಾ ಎಂದರೆ 'ಪರೀಕ್ಷೆ' ಅಥವಾ 'ವಿಶ್ಲೇಷಣೆ.' ವೇದದ ಮೊದಲ ಅಥವಾ ಪೂರ್ವಭಾಗದಲ್ಲಿ ಕರ್ಮಕಾಂಡ ಬರುತ್ತದೆ. ಯಜ್ಞಯಾಗಾದಿಗಳ ಸಮಯದಲ್ಲಿ ಉಪಯೋಗಿಸುವ ಮಂತ್ರಗಳು ಮತ್ತು ಯಜ್ಞ ಮಾಡುವ ವಿಧಾನಗಳು ಆ ಭಾಗದಲ್ಲಿ ವಿವರಿಸಲ್ಪಟ್ಟಿವೆ. ಇವುಗಳನ್ನೇ ಪ್ರಮುಖವಾಗಿ ಪರಿಗಣಿಸುವ ಶಾಸ್ತ್ರವೇ **ಪೂರ್ವಮೀಮಾಂಸಾ ಶಾಸ್ತ್ರ**. ಜೈಮಿನಿಯು ಯುಧಿಷ್ಠಿರ ಮಾಡಿದ ಅಶ್ವಮೇಧ ಯಾಗದಲ್ಲಿ ಪುರೋಹಿತನಾಗಿದ್ದನಂತೆ. ಇವನು ವ್ಯಾಸಮಹರ್ಷಿಯ ಶಿಷ್ಯನೆಂದೂ, ವೇದಗಳನ್ನು ವಿಭಾಗಿಸಿದ ವ್ಯಾಸನು ಇವನಿಗೆ 'ಸಾಮವೇದ'ವನ್ನು ಉಪದೇಶಿಸಿದನೆಂದೂ ಶತಪಥ ಬ್ರಾಹ್ಮಣವು ಹೇಳುತ್ತದೆ. ಇವನು ರಚಿಸಿದನೆಂದು ಹೇಳಲಾಗುವ ಕೃತಿಗಳಲ್ಲಿ ಕೆಲವು ಹೀಗಿದೆ: **ಜೈಮಿನಿ ಸಂಹಿತಾ, ಜೈಮಿನಿ ಬ್ರಾಹ್ಮಣ, ಜೈಮಿನಿ ಭಾರತ, ಜೈಮಿನಿ ಸ್ಮೃತಿ** ಮುಂತಾದವು. ಯಜ್ಞಯಾಗಾದಿಗಳನ್ನು ಸರಿಯಾಗಿ ಮಾಡಿದರೆ, ಅದರಿಂದ ಪುಣ್ಯ ಲಭಿಸುತ್ತದೆ, ಅದರಿಂದ ಸ್ವರ್ಗ ಸಿಗುತ್ತದೆ ಎಂದು ಪೂರ್ವಮೀಮಾಂಸಕರು ನಂಬುತ್ತಾರೆ.